ಪಾಧ್ಯಾಯರಾಗಿ ಏನು ಮುಂಬಡ್ತಿ ಬರುತ್ತದೆ. ಆದರಲ್ಲಿ ರೋಸ್ಟರ್ ಪದ್ಧತಿಯನ್ನು ಅನುಸರಿಸುತ್ತಿದ್ದೇವೆ. ಆದರೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವಂತೆ ಎಸ್.ಪಿ. ಎಸ್.ಟಿ. ಶಿಕ್ಷಕರಿಗೂ ಪ್ರಮೋಷನ್ ಕೊಡುತ್ತೀರೋ ಇಲ್ಲವೋ ಎಂದು ಕೇಳಿದ್ದಾರೆ. ಈಗಿರುವುದರಲ್ಲಿ ೧೦೦ಕ್ಕೆ ೨೫ ರಷ್ಟು ಮುಂಬಡ್ತಿಯ ವ್ಯವಸ್ಥೆ ಇದೆ. ಈ ರೀತಿ ಕೊಡುವಾಗ ರೋಸ್ಟರ್ ಸಿಸ್ಟಂ ಅನುಸರಿಸುತ್ತಾ ಇಲ್ಲ.

ಶ್ರೀ ಬಿ. ಎನ್. ಚವಾಣ್.—ಮಾನೇಜ್‌ಮೆಂಟ್‌ನವರು ನಡೆಸತಕ್ಕ ವಿದ್ಯಾಸಂಸ್ಥೆಗಳಲ್ಲಿ ಈ ರೋಸ್ಟರ್ ಸಿಸ್ಟಂ ಅನ್ನು ಇಂಪ್ಲಿಮೆಂಟ್ ಮಾಡುತ್ತಿದ್ದಾರೋ ಅಥವಾ ಇಲ್ಲವೋ ಎಂಬುದನ್ನು ತಿಳಿಸಬೇಕು.

ಶ್ರೀ ಕೆ. ಹೆಚ್. ರಂಗನಾಥ್.—ಇದಕ್ಕೆ ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ, ಉತ್ತರ ಕೊಡುತ್ತೇನೆ.

ಕರ್ನಾಟಕ ರಾಜ್ಯದಲ್ಲಿ ಬೆಳೆ ವಿಮಾ ಯೋಜನೆ ಮಾಡಿಸಿದವರ ಸಂಖ್ಯೆ ಬಗ್ಗೆ

೪೮೪೪ (೧೫೫೫) ಶ್ರೀ ಜಿ.ಎಸ್ ಆಚಾರ್ (ಬೈಂದೂರು).—ಮಾನ್ಯ ಕೃಷಿ ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಕರ್ನಾಟಕ ರಾಜ್ಯದಲ್ಲಿ ೧೯೮೮-೮೯ ಮತ್ತು ೧೯೮೯-೯೦ನೇ ವರ್ಷದಲ್ಲಿ ಎಷ್ಟು ಜನ ರೈತರು ಬೆಳೆವಿಮೆ ಮಾಡಿಸಿದ್ದಾರೆ (ಜಿಲ್ಲಾವಾರು ವಿವರ ನೀಡುವುದು) ?

ಆ) ಅವುಗಳಲ್ಲಿ (೧) ರಾಷ್ಟ್ರೀಕೃತ ಬ್ಯಾಂಕ್ (೨) ಗ್ರಾಮೀಣ ಬ್ಯಾಂಕು (೩) ಸಹಕಾರಿ ಸಂಸ್ಥೆಗಳ ಮೂಲಕ ಏಮೆ ಮಾಡಿಸಿದ್ದೆಷ್ಟು ?

ಇ) ಅವುಗಳ ಪೈಕಿ ಎಷ್ಟು ಮಂದಿಗೆ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಪರಿಹಾರ ಒದಗಿಸಲಾಗಿದೆ ?

ಶ್ರೀ ಎಸ್. ಬಂಗಾರಪ್ಪ (ಕೃಷಿ ಮತ್ತು ತೋಟಗಾರಿಕೆ ಸಚಿವರು).—

ಅ) ೧೯೮೮-೮೯ನೇ ಸಾಲಿನಲ್ಲಿ ಬೆಳೆ ವಿಮಾ ಯೋಜನೆಯನ್ನು ಜಾರಿಗೊಳಿಸುವ ಬಗ್ಗೆ ಕೇಂದ್ರ ಸರಕಾರವು ನಿರ್ಣಯವನ್ನು ತಡವಾಗಿ ತೆಗೆದುಕೊಂಡು ತಿಳಿಸಿದ್ದರಿಂದ ರಾಜ್ಯದಲ್ಲಿ ಬೆಳೆ ವಿಮಾ ಯೋಜನೆಯನ್ನು ಜಾರಿಗೊಳಿಸಲಾಗಲಿಲ್ಲ. ೧೯೮೯-೯೦ನೇ ಸಾಲಿನಲ್ಲಿ ೨.೦೪,೮೪೦ ಜನ ರೈತರು ಬೆಳೆ ವಿಮೆ ಮಾಡಿಸಿದ್ದರು. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಹಣಕಾಸು ಸಂಸ್ಥೆಗಳ ಮೂಲಕ ೧೯೮೯-೯೦ನೇ ಸಾಲಿನಲ್ಲಿ ಮಾಡಲಾದ ವಿಮಾ ಪೊತ್ತವು ಈ ಕೆಳಕಂಡಂತಿದೆ.

ಸಂಸ್ಥೆಗಳು	ವಿಮಾ ಮಾಡಲಾದ ಪೊತ್ತ (ಲಕ್ಷ. ರೂಗಳಲ್ಲಿ)
೧) ರಾಷ್ಟ್ರೀಕೃತ ಬ್ಯಾಂಕ್	೧೩೭೪
೨) ಗ್ರಾಮೀಣ ಬ್ಯಾಂಕು	೯೮೬
೩) ಸಹಕಾರಿ ಸಂಸ್ಥೆಗಳು	೨೫೫೭
ಒಟ್ಟು	೪೯೧೭

ಇ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ:
ಅನುಬಂಧ

ಕರ್ನಾಟಕದಲ್ಲಿ ೧೯೮೯-೯೦ನೇ ಸಾಲಿನಲ್ಲಿ ಬೆಳೆ ವಿಮಾ ಯೋಜನೆಯಡಿಯಲ್ಲಿ ಜಿಲ್ಲಾವಾರು ಬೆಳೆ ವಿಮೆ ಮಾಡಿಸಿದ ರೈತರ ಸಂಖ್ಯೆ ನಷ್ಟ ಪರಿಹಾರವನ್ನಾಗಿ ನೀಡಿದ ಹಣ ಮತ್ತು ಲಾಭ ಪಡೆದವರ ಸಂಖ್ಯೆ

ಕ್ರ ಸಂಖ್ಯೆ	ಜಿಲ್ಲೆ	ಬೆಳೆ ವಿಮೆ ಮಾಡಿಸಿದ ರೈತರ ಸಂಖ್ಯೆ (ಮುಂಗಾರು ಹಂಗಾರು ಮತ್ತು ಬೇಸಿಗೆ)	ನಷ್ಟ ಪರಿಹಾರವನ್ನಾಗಿ ನೀಡಿದ ಗಳಲ್ಲಿ (ಲಕ್ಷ ರೂ ಗಳಲ್ಲಿ) (ಮುಂಗಾರು ಮಾತ್ರ)	ಲಾಭಪಡೆದ ರೈತರ ಸಂಖ್ಯೆ	ಪರಾ
೧.	ಬೆಂಗಳೂರು (ನಗರ ಮತ್ತು ಗ್ರಾಮೀಣ)	೪೨೧	—	—	ಹಿಂಗಾರು ಮತ್ತು
೨.	ಬೆಳಗಾವಿ	೬೪೯೯	೦.೮೧	೪	ಬೇಸಿಗೆ ಹ್ಯಂಗಾಮು
೩.	ಬೀದರ್	೧೬೪೫೬	೧.೯೯	೧೩೬೫	ಗಳ ಬೆಳೆ ಕಟಾವು
೪.	ಬಳ್ಳಾರಿ	೧೦೪೦೫	—	—	ಸಮೀಕ್ಷೆಗಳನ್ನು
೫.	ಬಿಜಾಪುರ	೨೪೨೩	—	—	ಜಿ.ಐ.ಸಿ. ಇವರಿಗೆ
೬.	ಚಿಕ್ಕಮಗಳೂರು	೫೩೭೬	—	—	ನಷ್ಟ ಪರಿಹಾರವನ್ನು
೭.	ಚಿತ್ರದುರ್ಗ	೪೬೭೪	೦.೪೨	೭೪	ಬೇಗನೆ ನೀಡಲು ಕಳು
೮.	ದಕ್ಷಿಣ ಕನ್ನಡ	೧೫೪೨	—	—	ಹಿಸಿ ಕೊಡಲು ಕ್ರಮ
೯.	ಧಾರವಾಡ	೩೩೧೩೨	೬೬.೯೮	೧೧೯೭೦	ತೆಗೆದುಕೊಳ್ಳಲಾಗುತ್ತದೆ
೧೦.	ಗುಲಬರ್ಗಾ	೩೪೯೩೮	೦.೮೮	೨೮೮	
೧೧.	ಹಾಸನ	೨೪೪೭	೦.೦೧	೧೨	
೧೨.	ಕೋಲಾರ	೫೮೫೧	೦.೦೧	೬	
೧೩.	ಮಂಡ್ಯ	೬೧೩೮	—	—	
೧೪.	ಮೈಸೂರು	೬೦೪೬	೦.೦೨	೧	
೧೫.	ರಾಯಚೂರು	೧೧೬೧೩	೨.೪೬	೬೮೬	
೧೬.	ಶಿವಮೊಗ್ಗ	೧೫೯೧೨	—	—	
೧೭.	ತುಮಕೂರು	೮೬೯೨	—	—	
೧೮.	ಉತ್ತರ ಕನ್ನಡ	೨೩೧೫೮	—	—	
೧೯.	ಕೊಡಗು	೮೩೩೭	—	—	
	ಒಟ್ಟು ಮೊತ್ತ	೨೦೪೮೪೦	೭೨.೭೮	೧೪೪೦೬	

ಶ್ರೀ ಜಿ.ಎಸ್. ಆಚಾರ್,—ಸನ್ಮಾನ್ಯ ಅಧ್ಯಕ್ಷರೇ, ಈ ಬೆಳೆ ವಿಮೆ ಎನ್ನುವುದು ಬೆಳೆ ಸಾಲದ ವಿಮೆ ಯೋಜನೆಯಾಗಿದೆ. ಯಾರು ಸಾಲ ತೆಗೆದುಕೊಂಡಿರುವವರು ಇದ್ದಾರೆ, ಅವರಿಗೆ ಮಾತ್ರ ಈ ಫಲ ಸಿಕ್ಕುತ್ತಿದೆ. ಆದ್ದರಿಂದ ಎಲ್ಲಾ ರೈತರಿಗೂ ಒಳಪಡುವ ಬೆಳೆ ವಿಮಾ ಯೋಜನೆಯನ್ನು ಮಾಡುವ ಬಗ್ಗೆ ಸರ್ಕಾರ, ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತದೆಯೇ? ಎರಡನೆಯದಾಗಿ, ಈ ರೀತಿ ವಿಮೆ ಮಾಡಿರುವ ಮೊತ್ತ ಯಾವುದಿದೆ, ಇದರಲ್ಲಿ ಸಹಕಾರಿ ಸಂಸ್ಥೆಗಳಿಂದ ಜಾಸ್ತಿ ವಸೂಲಾಗಿದೆ. ರಾಷ್ಟ್ರೀಕೃತ ಬ್ಯಾಂಕ್‌ಗಳು, ಗ್ರಾಮೀಣ ಬ್ಯಾಂಕುಗಳಿಗಿಂತ ಹೆಚ್ಚಿಗೆ ಸಹಕಾರಿ ಸಂಸ್ಥೆಗಳಿಂದ ಒತ್ತಾಯ ಮಾಡಿ ಈ ವಿಮೆ ಮಾಡಿಸುವಂಥ ಪರಿಸ್ಥಿತಿ ಇದೆ. ಇದರಿಂದಾಗಿ, ಯಾವತ್ತೂ ಕ್ಷಾಮಬಾರದೇ ಇರತಕ್ಕ ಕೆಲವು ಜಿಲ್ಲೆಗಳು ಇವೆ. ದಕ್ಷಿಣ ಕನ್ನಡ, ಉತ್ತರ ಕನ್ನಡ, ಮಂಡ್ಯ, ಶಿವಮೊಗ್ಗ, ಕೊಡಗು ಇವು ಕ್ಷಾಮಬಾರದೇ ಇರತಕ್ಕ ಜಿಲ್ಲೆಗಳು. ಎರಡು ಲಕ್ಷದರದ ನಾಲ್ಕು ಸಾವಿರದಎಂಟನೂರು ನಲವತ್ತು ಜನ ರೈತರು ಬೆಳೆ ವಿಮೆ ಮಾಡಿಸಿದ್ದು ಅದರಲ್ಲಿ ಸುಮಾರು ೬೦ ಸಾವಿರ ಜನ ರೈತರು ಈ ಕೆಲವು ಜಿಲ್ಲೆಗಳಿಂದ ಬರುತ್ತಾರೆ. ಅಲ್ಲ ಯಾವೊತ್ತು ಕ್ಷಾಮ ಬರುವುದಿಲ್ಲ. ಈ ಬೆಳೆ ವಿಮೆ ಪ್ರಯೋಜನ ಅವರಿಗೆ ಸಿಗುವುದಿಲ್ಲ. ಇಲ್ಲಿ ಅನಾವಶ್ಯಕವಾಗಿ ರೈತರು ವಿಮೆ ಮಾಡಿಸುವಂತಹ ಒಂದು ಪರಿಸ್ಥಿತಿ ಇದೆ. ಇದನ್ನು ದಯವಿಟ್ಟು ತಪ್ಪಿಸಬೇಕು. ಯಾವುದೇ ಪರಿಹಾರ ಸಿಗದಿರುವುದರಿಂದ ಇದನ್ನು ತಪ್ಪಿಸಲಿಕ್ಕೆ ಸರಕಾರ ಆಲೋಚನೆ ಮಾಡುತ್ತದೆಯೇ? ಮೂರನೆಯದಾಗಿ ಬೆಳೆ ವಿಮೆ ಮಾಡುವಾಗ ಬೇರೆ ಯಾವುದರ ಮೇಲೆ ವಿಮೆ ಮಾಡಿಸುತ್ತಾರೋ ಅದೇ ಆಧಾರ. ಪಶುಗಳ ಮೇಲೆ ವಿಮೆ ಮಾಡಿಸಿದಾಗ ಪಶು ಸತ್ತು ಹೋದರೆ

ವಿಮೆ ಹಣ ಸಿಗುತ್ತದೆ. ಆದರೆ ಇದರಲ್ಲಿ ಹೊಲದಲ್ಲಿ ಏನೂ ಪರಿಹಾರ ಸಿಗುವುದಿಲ್ಲ. ರ್ಯಾಂಡಾಮ್ ಸರ್ವೆ ಎಂದು ಮಾಡಿ, ಇಡೀ ತಾಲ್ಲೂಕಿನಲ್ಲಿ ಎಲ್ಲೆಲ್ಲಿ ಬೆಳೆಹೋಗಿದೆ ಅಂತಹ ಎರಡು ಮೂರು ಕಡೆಗಳಲ್ಲಿ ಸರ್ವೆ ಮಾಡಿಕೊಂಡು ಅದರ ಆಧಾರದ ಮೇಲೆ ವಿಮೆಹಣ ಪಾವತಿಯಾಗುತ್ತದೆ. ಇದು ಸಮಂಜಸವಾದುದಲ್ಲ. ಆದುದರಿಂದ ಸಮಂಜಸವಾದ ವಿಧಾನವನ್ನು ಅಳವಡಿಸುವುದಕ್ಕೆ ಸರಕಾರದವರು ಕ್ರಮ ಕೈಗೊಳ್ಳುತ್ತಾರೆಯೇ ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರಾದ ಆಚಾರ್‌ರವರು ಮೂರು ವಿಷಯಗಳನ್ನು ಕೇಳಿದ್ದಾರೆ. ಮೊದಲನೆಯದಾಗಿ ಯಾರು ಸಾಲವನ್ನು ಪಡೆದಿರುತ್ತಾರೆ ಆ ಸಾಲವನ್ನು ಪಡೆದವರಿಗೆ ಮಾತ್ರ ವಿಮೆ ಜಾರಿ ಮಾಡುತ್ತಿದ್ದಾರೆ, ಬೇರೆಯವರಿಗೆ ಮಾಡುತ್ತಿಲ್ಲ ಎಂಬ ವಿಚಾರ ಅವರು ಹೇಳಿದ್ದಾರೆ. ಇದು ಸರಿಯಾಗಿರತಕ್ಕಂಥ ಅಭಿಪ್ರಾಯ ಅಲ್ಲ. ಏತಕ್ಕೆಂದರೆ ವಿಮೆ ಮಾಡಿಸುವುದಕ್ಕೆ ಕಾರಣಗಳು ಬೇರೆ ಇದ್ದಾಗ, ಸಾಲ ಪಡೆಯುವವರಿಗೆ ಮಾತ್ರ ವಿಮೆ ಮಾಡುವ ಸೌಲಭ್ಯ ಕೊಡುವುದಿಲ್ಲ. ಮಳೆ ಬೀಳದೆ ಕ್ಷಾಮ ಬಂದಾಗ ಅಥವಾ ಜಲಕ್ಷಾಮ ಬಂದಾಗ ಮತ್ತು ಬೇರೆ ಬೇರೆ ಪ್ರಕೃತಿ ವಿಕೋಪಕ್ಕೆ ತುತ್ತಾಗಿರತಕ್ಕಂಥ ಸಂದರ್ಭಗಳಲ್ಲಿ ಹೆಚ್ಚಾಗಿ ನಾವು ವಿಮೆ ಬಗ್ಗೆ ನಾವು ವಿಚಾರ ಮಾಡುತ್ತೇವೆ. ಅದ ಬೆಳೆ ವಿಮೆಗೆ ಕೂಡಾ ಅನ್ವಯವಾಗುತ್ತದೆ. ಈ ಸಂದರ್ಭದಲ್ಲಿ ನಾವು ಸಾಲ ಕೊಟ್ಟಿದ್ದರೆ ಅದು ಒಂದು ಕಾರಣ ಆಗಬಹುದು. ಆದರೆ ಸಾಲ ತೆಗೆದುಕೊಂಡವರಿಗೆ ಮಾತ್ರ ವಿಮೆ ಮಾಡತಕ್ಕ ವಿಚಾರ ಅದು ಕಾನೂನಿನಲ್ಲಿ ಕೂಡ ಬರುವುದಿಲ್ಲ. ಆದುದರಿಂದ ಈ ಪ್ರಶ್ನೆ ಕೂಡಾ ಉದ್ಭವವಾಗುವುದಿಲ್ಲ, ಎರಡನೆಯದಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೬೦ ಸಾವಿರದಷ್ಟು ಜನ ವಿಮೆ ಮಾಡಿಸಿದ್ದಾರೆ. ಅಂಕಿ ಅಂಶಗಳನ್ನು ನೋಡಿದಾಗ ಎರಡು ಲಕ್ಷದ ನಾಲ್ಕು ಸಾವಿರದ ಎಂಟನೂರ ನಲವತ್ತು ಜನ ನಮ್ಮ ರಾಜ್ಯದಲ್ಲಿ ವಿಮೆ ಯೋಜನೆ ಮಾಡಿಸಿದ್ದು, ಅದರಲ್ಲಿ ಹೆಚ್ಚಿನ ಪಾಲು ಅಲ್ಲೂ ಕೂಡಾ ಮಾಡಿಸಿದ್ದಾರೆ ಎಂಬುದು ನಿಜ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆ ಬಾರದೆ ಕ್ಷಾಮ ಬಿಳತಕ್ಕದ್ದು ಸಾಮಾನ್ಯವಾಗಿ ಅಪರೂಪ. ಅದು ಆಗಿಲ್ಲ ಎಂದು ಲೆಕ್ಕ ಇಟ್ಟುಕೊಂಡರೂ ಕೂಡಾ, ಮಳೆ ಜಾಸ್ತಿಯಾಗಿ ಜಲಕ್ಷಾಮ ಆಗಿರತಕ್ಕಂಥಾದ್ದು ಅಲ್ಲಿ ಬಂದಿದೆ. ಪ್ರಕೃತಿ ವಿಕೋಪಕ್ಕೆ ತುತ್ತಾಗಿ. ಅನೇಕ ನದಿಗಳು ಪ್ರವಾಹದಿಂದ ಉಕ್ಕಿಹರಿಯತಕ್ಕಂಥ ಸಂದರ್ಭಗಳನ್ನು ಜನ ಗಣನೆಗೆ ತೆಗೆದುಕೊಂಡು ವಿಮೆ ಮಾಡಿಸಿದ್ದಾರೆ. ವಿಮೆ ಮಾಡಿಸತಕ್ಕ ಆವಶ್ಯಕತೆ ಕರ್ನಾಟಕ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ, ಉತ್ತರ ಕರ್ನಾಟಕದಲ್ಲಿ ಹಳೇ ಮೈಸೂರು ಭಾಗದಲ್ಲಿ, ಕೋಲಾರ ಇತ್ಯಾದಿ ಭಾಗದಲ್ಲಿ ಎಷ್ಟಿದೆ. ಅದಕ್ಕೆ ಎಷ್ಟು ಸಕಾರಣಗಳು ಸಿಗುತ್ತವೆ. ಆದು ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಕೂಡಾ ಸಿಗುತ್ತದೆಂಬ ಅಂಶವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಯೋಜನೆ ಪ್ರಕಾರ ಹೆಚ್ಚು ಜನರನ್ನು ವಿಮೆಯ ಚೌಕಟ್ಟಿನಲ್ಲಿ ತರಬೇಕೆಂಬ ಒತ್ತಡವನ್ನು ನಾವು ಕೇಂದ್ರ ಸರಕಾರದ ಮೇಲೆ ಈಗಾಗಲೇ ತಂದಿದ್ದೇವೆ. ಕೊನೆಯ ಪ್ರಶ್ನೆ ಏನು ಕೇಳಿದರು ಎಂದು ನನಗೆ ಗೊತ್ತಾಗಲಿಲ್ಲ.

ಶ್ರೀ ಜಿ.ಎಸ್. ಆಚಾರ್.—ವೈಯಕ್ತಿಕವಾಗಿ ಹೊಲಗಳನ್ನು ಬೇಸಿಸ್ ಆಗಿ ಇಟ್ಟುಕೊಂಡು ಸರ್ವೆ ಮಾಡಿಸಬೇಕೇ ಹೊರತು ಇಡೀ ತಾಲ್ಲೂಕನ್ನು ಒಂದು ಯೂನಿಟ್ ಆಗಿ ತೆಗೆದುಕೊಂಡು, ಯಾರ್ಯಾರದ್ದೋ ಬೆಳೆ ಹಾಳಾದ ಒಂದು ಅನುಭವದ ಆಧಾರದ ಮೇಲೆ ಪರಿಹಾರ ಫಿಕ್ಸ್ ಮಾಡುವುದು ಸರಿಯಲ್ಲ ಎಂದು ನನ್ನ ಅಭಿಪ್ರಾಯ.

ಶ್ರೀ ಎಸ್. ಬಂಗಾರಪ್ಪ,—ಬಹಳ ಪ್ರಮುಖವಾಗಿ ಬೆಳೆ ವಿಮೆ ವಿಚಾರದಲ್ಲಿ ಯಾವುದನ್ನು ಯೂನಿಟ್ ಆಗಿ ತೆಗೆದುಕೊಳ್ಳಬೇಕೆಂದು ಒಂದು ಪ್ರಶ್ನೆ, ನನ್ನ ಪ್ರಕಾರ ಇದು ಬಹಳ ಚರ್ಚೆಗೆ ಒಳಪಟ್ಟಿರತಕ್ಕಂಥ ವಿಚಾರ ಎಂದು ಭಾವಿಸಿದ್ದೇನೆ. ಇವತ್ತು ಒಂದು ತಾಲ್ಲೂಕನ್ನು ಯೂನಿಟ್ ಆಗಿ ಇಟ್ಟುಕೊಳ್ಳಬೇಕೋ, ಹೋಬಳಿಯನ್ನು ಇಟ್ಟುಕೊಳ್ಳಬೇಕೋ, ಗ್ರಾಮವನ್ನು ಇಟ್ಟುಕೊಳ್ಳಬೇಕೊಗ ಎಂಬುದು ಪ್ರಶ್ನೆ. ಒಂದೊಂದು ಕಡೆ ಗ್ರಾಮದ ಒಂದು ಭಾಗದಲ್ಲಿ ಮಳೆ ಬಿದ್ದರೆ, ಇನ್ನೊಂದು ಭಾಗದಲ್ಲಿ ಮಳೆ ಬೀಳುವುದಿಲ್ಲ. ಅನೇಕ ಸಾರಿ ಇಂತಹ ಪ್ರಕರಣಗಳು ನಮ್ಮ ಗಮನಕ್ಕೆ ಬಂದಿರುತ್ತವೆ. ಇದು ಇನ್ನೂ ಕೂಡಾ ಚರ್ಚೆಗೆ ಒಳಪಟ್ಟಿರತಕ್ಕಂಥ ವಿಚಾರ. ಸರಕಾರದ ಅಭಿಪ್ರಾಯ ಏನು ಎಂಬ ಭಾವನೆಯಿಂದ ಹೇಳಬೇಕೆಂದರೆ. ಈ ವಿಚಾರದಲ್ಲಿ ಕೇಂದ್ರದ ಜೊತೆಗೆ ಮಾತುಕತೆ ಮಾಡುತ್ತಿದ್ದೇವೆ, ಆದಷ್ಟು ಸಣ್ಣಟ್ಟಿಗೆ ಒಂದು ಹಳ್ಳಿಯನ್ನು ಯೂನಿಟ್ ಆಗಿ ಇಟ್ಟುಕೊಳ್ಳಬೇಕೆಂಬ ಅಭಿಪ್ರಾಯವನ್ನು ಗಮನದಲ್ಲಿಟ್ಟು ಕೇಂದ್ರದ ಮೇಲೆ ಹೆಚ್ಚಿನ ಒತ್ತಡ ತರಬೇಕೆಂಬ ಉದ್ದೇಶ ನಾವು ಇಟ್ಟುಕೊಂಡಿದ್ದೇವೆ.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ಬೆಳೆ ಸಾಲದವಿಮೆ ಅಲ್ಲಿ, ಎಲ್ಲಾ ರೈತರೂ ವಿಮೆ ಮಾಡಬಹುದು ಎಂದು ಮಾನ್ಯ ಸಚಿವರು ಹೇಳಿದರು. ಆದರೆ ಬೆಳೆ ಸಾಲ ಮಾಡಿದವರಿಗೆ

ಇದು ವಾಲೆಂಟರಿಯಾಗಿ ಇರಲಿ. ಈಗ ಸಹಕಾರ ಸಂಘಗಳಲ್ಲಿ ಸಾಲ ತೆಗೆದು ಕೊಳ್ಳಲು ಹೋದವರಿಂ ಕಡ್ಡಾಯವಾಗಿ ವಿಮೆ ಮಾಡಲೇಬೇಕು. ಇಲ್ಲದಿದ್ದರೆ ಸಾಲ ಸಿಗುವುದಿಲ್ಲ. ವಾಲೆಂಟರಿಯಾಗಿ ಯಾರು ಸಾಲ ತೆಗೆದುಕೊಳ್ಳಲು ಬರುತ್ತಾರೋ ಅವರು ಬೇಕಾದರೆ ವಿಮೆ ಮಾಡಲಿ ಇದನ್ನು ಕಡ್ಡಾಯ ಮಾಡಬಾರದು, ಈ ಬಗ್ಗೆ ಸರ್ಕಾರ ಪರಿಶೀಲನೆ ಮಾಡುವುದೇ ?

ಶ್ರೀ ಎಸ್. ಬಂಗಾರಪ್ಪ. ಮಾನ್ಯ ಅಧ್ಯಕ್ಷರೇ, ಕಡ್ಡಾಯವಾಗಿ ವಿಮೆ ಮಾಡಬೇಕೆನ್ನುವ ನಿಯಮವೇನೂ ಇಲ್ಲ. ಇದರ ಬಗ್ಗೆ ಮಾನ್ಯ ಸದಸ್ಯರಿಗೆ ಆನುಮಾನ ಬೇಡ. ಸಹಕಾರ ಸಂಘಗಳಲ್ಲಿ ಈಗ ವಿಮೆ ಮಾಡಬೇಕೆನ್ನುವ ಉದ್ದೇಶ ಇದ್ದರೆ ಈ ಒಂದು ಅಭಿಪ್ರಾಯ ದಕ್ಷಿಣಕನ್ನಡ ಜಿಲ್ಲೆಗೆ ಸೀಮಿತ ಗೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಕರ್ನಾಟಕ ರಾಜ್ಯದಲ್ಲಿ ಸಹಕಾರಿ ಸಂಘಗಳ ವ್ಯಾಪ್ತಿ ದೊಡ್ಡದಿರುವುದರಿಂದ ಬೇರೆ ಬೇರೆ ಜಿಲ್ಲೆಗಳಿಗೂ ಇದು ಆನ್ವಯವಾಗಬೇಕಿತ್ತು. ಆದರೆ ಆ ರೀತಿ ಇಲ್ಲ. ಸಕಾರಣವಿಲ್ಲದೆ ಯಾರಾದರೂ ಆ ರೀತಿ ಒತ್ತಾಯಪೂರ್ವಕವಾದರೂ ಮಾಡುತ್ತಿದ್ದರೆ, ಅಂತಹ ವಿಚಾರಗಳು ಇದ್ದರೆ ಸರ್ಕಾರದಗಮನಕ್ಕೆ ಮಾನ್ಯ ಸದಸ್ಯರು ಕೆಲವು ಪ್ರಕರಣಗಳನ್ನು ತಂದರೆ, ಆ ಬಗ್ಗೆ ನಾನು ಸೂಕ್ತ ಕ್ರಮ ಸರ್ಕಾರದ ಪರವಾಗಿ ತೆಗೆದುಕೊಳ್ಳುತ್ತೇವೆ. ಇಷ್ಟು ಮಾತ್ರ ನಿಜ. ಸಹಕಾರಿ ಸಂಘಗಳ ಆಂದೋಳನಕ್ಕೆ ಹೆಚ್ಚಾಗಿ ಶಕ್ತಿತುಂಬತಕ್ಕದ್ದು ಇದೂ ಕೂಡ ಒಂದು ಮೂಲಭೂತವಾಗಿ ಎನ್ನತಕ್ಕಂಥ ಅನಿಸಿಕೆಯನ್ನು ಮಾನ್ಯ ಸದಸ್ಯರು ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸಿದ್ದೇನೆ. ಆ ದೃಷ್ಟಿಯಲ್ಲಿ ಅಂಕಿ ಅಂಶಗಳ ಪ್ರಕಾರ ಇವತ್ತು ಲಕ್ಷ ರೂಗಳಲ್ಲಿ ನಾನು ಹೇಳುವುದಾದರೆ ಪ್ರಾಥಮಿಕ ಕೃಷಿ ಪತ್ತಿನ ಬ್ಯಾಂಕ್‌ಗಳಲ್ಲಿ ೧೩೭೪ ಲಕ್ಷ ರೂಪಾಯಿಗಳು, ಗ್ರಾಮೀಣ ಬ್ಯಾಂಕ್ ೯೮೬ ಲಕ್ಷ ರೂಪಾಯಿಗಳಿವೆ, ಸಹಕಾರ ಸಂಸ್ಥೆಗಳಲ್ಲಿ ೨೫೫೭ ಲಕ್ಷ ರೂಪಾಯಿಗಳು. ಸುಮಾರಾಗಿ ಈ ಅಂಕಅಂಶಗಳನ್ನು ನೋಡಿಯೇ ಮಾನ್ಯ ಸದಸ್ಯರು ಹೇಳಿರಬೇಕು. ನಿಮ್ಮ ಅಭಿಪ್ರಾಯ ಒಳ್ಳೆಯದು ಇದೆ. ಈ ಸಹಕಾರ ಆಂದೋಳನದ ಮುಖಾಂತರ ಬರತಕ್ಕಂಥಾದ್ದು ಒಳ್ಳೆಯ ಉದ್ದೇಶದಿಂದ ಕೂಡಿದೆ. ಆದರೆ ಒತ್ತಾಯ ಮಾಡುವುದಕ್ಕೆ ಬರುವ ಹಾಗೆ ಇಲ್ಲ. ಹಾಗೇನಾದರೂ ಇದ್ದರೆ ಹೇಳಿ, ನಾನು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ ಈಗಾಗಲೇ ಹಿರಿಯ ಸಚಿವರಾದ ಮಾನ್ಯ ಬಂಗಾರಪ್ಪನವರು ಹೇಳಿದ ಹಾಗೆ ಬೆಳೆ ವಿಮೆ ಯೋಜನೆ ಬೆಳೆ ನಾಶವಾದ ರೈತರಿಗೆ ಮಾತ್ರ ಪರಿಹಾರ ಸಿಗುವಂತಾದ್ದು, ಆದರೆ ಆ ಪರಿಹಾರ ಕೂಡ ಇವತ್ತು ಸಿಗುತ್ತಿಲ್ಲ ಇದು ತಮಗೂ ಗೊತ್ತಿರುವ ಸಂಗತಿ. ಆದ್ದರಿಂದ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದು ಪ್ರತಿ ಯೊಂದು ಹಳ್ಳಿಯನ್ನು ಯೂನಿಟ್ ಆಗಿ ಮಾಡಿ ತಾವು ಹೇಳಿದಂತೆ ಕಾರ್ಯ ರೂಪಕ್ಕೆತರಲು ಒತ್ತಾಯ ಮಾಡಬೇಕು. ತಾವು ಕೊಟ್ಟಂತಹ ಅಭಿಪ್ರಾಯದಲ್ಲಿ ನಾನು ವಿಮೆ ಮಾಡಿದ್ದರೂ ಸಹ ಅದರ ಪರಿಹಾರ ಸಿಗುತ್ತದೆ ಎನ್ನುವ ಅರ್ಥದಲ್ಲಿ ತಾವು ಉತ್ತರ ಕೊಟ್ಟಿದ್ದೀರಿ. ಆ ರೀತಿ ಬೆಳೆ ವಿಮೆ ಮಾಡಿದ್ದರೆ ರೈತರಿಗೆ ಅದರ ಅನುಕೂಲ ಸಿಗುವುದಿಲ್ಲ ಆದ್ದರಿಂದ ಒಂದು ಹಳ್ಳಿಯನ್ನು ಯೂನಿಟ್ ಮಾಡಿ ರಾಜ್ಯ ಸರ್ಕಾರ ತತ್‌ಕ್ಷಣ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಕಾರ್ಯರೂಪಕ್ಕೆ ತರುವಂತಹ ಪ್ರಯತ್ನ ಮಾಡಬೇಕು. ಮತ್ತು ರೈತರಿಗೆ ಬೇಗ ಪರಿಹಾರ ಸಿಗುವಂತಾಗಬೇಕು ಹೋದ ವರ್ಷ ಎಷ್ಟು ಜನ ರೈತರಿಗೆ ಪರಿಹಾರ ಸಿಕ್ಕಿದೆ ಎಂಬುದನ್ನು ತಿಳಿಸಬೇಕು,

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ಅಂಕಿ ಅಂಶಗಳನ್ನು ಕೊಟ್ಟಿದ್ದೇನೆ. ಈಗ ಒಂದು ಹಳ್ಳಿಯನ್ನು ಯೂನಿಟ್ ಆಗಿ ಮಾಡಿದರೆ ಮಾತ್ರ ಪ್ರಕೃತಿ ವಿಕೋಪಕ್ಕೆ ಪದೇ ಪದೇ ಅಂದರೆ ವರ್ಷೇ ವರ್ಷ ಜಾಸ್ತಿಯಾಗುವ ಈ ಪರಿಸ್ಥಿತಿಯಲ್ಲಿ ಇದು ಒಳ್ಳೆಯದನ್ನು ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೀರಿ ಇಲ್ಲಿ ಹೋಬಳಿ ಮಟ್ಟ ಇಟ್ಟರೆ ಇಲ್ಲವೇ ತಾಲ್ಲೂಕು ಮಟ್ಟ ಇಟ್ಟರೂ ಬರುವುದಿಲ್ಲ. ಆದರೆ ಒಂದು ಹಳ್ಳಿಯನ್ನು ಯೂನಿಟ್ ಎಂದು ತೆಗೆದುಕೊಂಡರೆ ಸುಮಾರಾಗಿ ವಿಮೆಯ ಸದುದ್ದೇಶವೇ ಹಾಳಾಗಿ ಹೋಗಬಹುದು ಎಂಬ ಅಭಿಪ್ರಾಯಕೂಡ ಇದೆ. ಆದರೂ ಕೂಡ ರೈತರು ಉಳಿಯಬೇಕು, ಅವರು ಮುಂದೆ ಉತ್ಪಾದನೆ ಜಾಸ್ತಿ ಮಾಡುವಂತಾಗಬೇಕು ಎನ್ನುವ ಗುರಿಯನ್ನು ನಾವು ಅಂತಿಮವಾಗಿ ಇಟ್ಟುಕೊಂಡರೆ ಹಳ್ಳಿಯನ್ನು ಒಂದು ಯೂನಿಟ್ ಆಗಿ ಇಡಬೇಕು ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಸರ್ಕಾರದ ಅಭಿಪ್ರಾಯ ಕೂಡ ಅದೇ ಇದೇರೀತಿ ಇರಬೇಕೆಂದು ನಾವು ಕೇಂದ್ರ ಸರ್ಕಾರದ ಮೇಲೆ ಸಹ ಒತ್ತಡ ತರುತ್ತಿದ್ದೇವೆಂಬುದನ್ನು ಈಗಾಗಲೇ ಹೇಳಿದ್ದೇವೆ. ನಾನು ಅಂಕಿಅಂಶಗಳ ಪ್ರಕಾರ ಈಗಾಗಲೇ ತಿಳಿಸಿದ್ದೇನೆ. ಈ ಬಗ್ಗೆ ಯಾರದೂ ಭಿನ್ನಾಭಿಪ್ರಾಯ ಇಲ್ಲ ಎಲ್ಲರೂ ರೈತರ ಪರ ಇದ್ದಾರೆ. ರೈತರಿಗೆ ವಿಮೆ ಮಾಡಿಸಿದ ಮೇಲೆ ಸಹ ಹಣ ಸಿಕ್ಕಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದರು. ನಿಜಹೇಳಬೇಕೆಂದರೆ, ಬೆಳೆ ವಿಮೆಮಾಡಿಸಬೇಕೆಂಬ

ಪ್ರಜ್ಞೆ ಕೂಡ ಅನೇಕ ಕಡೆ ರೈತರಿಗೆ ಇನ್ನೂ ಬಂದಿಲ್ಲ. ಈ ಯೂನಿಟ್ ಪ್ರಶ್ನೆ ಬಗೆ ಹರಿಯದೆ ಬೆಳೆವಿಮೆ ಮಾಡಿಸಿದರೆ, ನಾಳೆ ರೈತರಿಗೆ ಅನುಕೂಲವಾಗುವುದಿಲ್ಲ ಎನ್ನುವ ವಿಚಾರ ಕೂಡ ಇದೆ. ಆದ್ದರಿಂದ ಕೇಂದ್ರ ಸರ್ಕಾರಕ್ಕೆ ಒತ್ತಡತರಬೇಕೆನ್ನುವ ಅಭಿಪ್ರಾಯ ಕೂಡ ನಾವು ಇಟ್ಟು ಕೊಂಡಿದ್ದೇವೆ. ಅದರ ಬಗ್ಗೆ ನಾವು ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ.

ಪ್ರಶ್ನೆ ಸಂಖ್ಯೆ ೪೮೫(೧೬೮೬) ಮಾನ್ಯ ಸದಸ್ಯರು ಸಭೆಯಲ್ಲಿ ಹಾಜರಿರಲಿಲ್ಲ.

ಸೂಪಾ ತಾಲ್ಲೂಕಿನಲ್ಲಿ ಕಪ್ಪು ಹಲಗೆ ಯೋಜನೆಯಡಿಯಲ್ಲಿ ಮಂಜೂರಾದ ಶಾಲೆಗಳ ಮತ್ತು ಕೊಠಡಿಗಳ ಸಂಖ್ಯೆ

೪೯೬(೧೪೪೩) ಶ್ರೀ ಪ್ರಭಾಕರ್ ಎಸ್. ರಾಣೆ. (ಕಾರವಾರ).—ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಸೂಪಾ ತಾಲ್ಲೂಕಿನಲ್ಲಿ ಕಪ್ಪು ಹಲಗೆ ಯೋಜನೆಯಡಿಯಲ್ಲಿ ಮಂಜೂರಾದ ಶಾಲೆಗಳ ಮತ್ತು ಕೊಠಡಿಗಳ ಸಂಖ್ಯೆ ಎಷ್ಟು ?

ಆ) ಇವುಗಳ ನಿರ್ಮಾಣ ಕಾರ್ಯ ಪೂರ್ಣಗೊಳ್ಳದಿರುವ ಹಾಗೂ ನಿರ್ಮಾಣ ಕಾರ್ಯ ಪ್ರಾರಂಭವಾಗದಿರುವ ಶಾಲೆಗಳ ಮತ್ತು ಕೊಠಡಿಗಳ ಸಂಖ್ಯೆ ಎಷ್ಟು ?

ಇ) ಈ ನಿರ್ಮಾಣ ಕೆಲಸವು ಕಳಪೆ ಕೆಲಸವಾಗಿರುವುದರ ಬಗ್ಗೆ ಸರ್ಕಾರಕ್ಕೆ ದೂರುಗಳು ಬಂದಿದೆಯೇ ?

ಈ) ಹಾಗದರೆ ಇದರ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಯುವಜನಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).—

ಅ) ಸೂಪಾ ತಾಲ್ಲೂಕಿನಲ್ಲಿ ೭೫ ಶಾಲೆಗಳನ್ನು ಕಪ್ಪು ಹಲಗೆ ಯೋಜನೆಯಡಿಯಲ್ಲಿ ಆಳವಡಿಸಲಾಗಿದೆ ಮತ್ತು ೭೭ ಹೊಸ ಕೊಠಡಿಗಳನ್ನು ಕಟ್ಟಲು ಮಂಜೂರಾಗಿ ನೀಡಲಾಗಿದೆ.

ಆ) ನಿರ್ಮಾಣ ಪೂರ್ಣಗೊಂಡ ಕೊಠಡಿಗಳ ಸಂಖ್ಯೆ —೨೬
ಮುಕ್ತಾಯ ಹಂತದಲ್ಲಿರುವ ಕೊಠಡಿಗಳ ಸಂಖ್ಯೆ—೪೨
ಪ್ರಾರಂಭಿಸದೆಇರುವ ಕೊಠಡಿಗಳ ಸಂಖ್ಯೆ —೦೯

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ

ಶ್ರೀ ಪ್ರಭಾಕರ್ ಎಸ್. ರಾಣೆ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಕಪ್ಪು ಹಲಗೆ ಯೋಜನೆಯಲ್ಲಿ ಸೂಪಾ ತಾಲ್ಲೂಕಿನಲ್ಲಿ ೭೫ ಹೊಸ ಕೊಠಡಿಗಳಲ್ಲಿ ಕೇವಲ ೨೬ ಕೊಠಡಿಗಳ ನಿರ್ಮಾಣ ಪೂರ್ತಿಯಾಗಿದೆ, ಮುಕ್ತಾಯ ಹಂತದಲ್ಲಿ ೪೨ ಕೊಠಡಿಗಳು ಇವೆ. ಇನ್ನೂ ೯ ಕೊಠಡಿಗಳ ಕಾರ್ಯ ಪ್ರಾರಂಭ ಮಾಡಿಲ್ಲವೆಂದು ಹೇಳಿದ್ದಾರೆ. ನಾನು ಒಂದು ಪ್ರಶ್ನೆ ಕೇಳುವುದೇನೆಂದರೆ, ಈ ಕೆಲಸ ಪ್ರಾರಂಭವಾದದ್ದು ಎಂದಿನಿಂದ ಅಥವಾ ಈ ಕೆಲಸಗಳನ್ನು ಕೈಗೆತ್ತಿಕೊಂಡದ್ದು ಯಾವಾಗ ? ಎಷ್ಟು ವರ್ಷವಾಯಿತು ? ನನಗೆ ತಿಳಿದ ಪ್ರಕಾರ ಸುಮಾರು ಎರಡು ವರ್ಷಕ್ಕೆ ಮೊದಲು ಈ ಕೆಲಸ ಪ್ರಾರಂಭಗೊಂಡಿದೆ. ಒಂದು ಕೊಠಡಿಗೆ ೩೦ ಸಾವಿರ ರೂಪಾಯಿ ವೆಚ್ಚ ಆಗುತ್ತದೆ. ಒಂದು ಹಳ್ಳಿಯಲ್ಲಿ ೩೦ ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಒಂದು ಕೊಠಡಿಯನ್ನು ನಿರ್ಮಾಣ ಮಾಡಲಿಕ್ಕೆ ಎಷ್ಟು ಕಾಲಾವಕಾಶ ಅಧಿಕಾರಿಗಳಿಗೆ ಅಥವಾ ಡಿಪಾರ್ಟ್‌ಮೆಂಟಿಗೆ ಬೇಕಾಗುತ್ತದೆ. ಎರಡು ವರ್ಷಗಳಾದರೂ ಸಹ ಶಿಕ್ಷಣ ಕ್ಷೇತ್ರದಲ್ಲಿ ಹಿಂದುಳಿದ ಪ್ರದೇಶಗಳಿಗೆ ವಿಶೇಷವಾದರೂ, ಈ ಸವಲತ್ತನ್ನು ಉಪಯೋಗಿಸಿಕೊಳ್ಳದೆ ವಿಫಲರಾದರೆ ಆ ಕಾರ್ಯಕ್ರಮವನ್ನು ಇಂಪ್ಲಿಮೆಂಟ್ ಮಾಡುವಂಥ ಅಧಿಕಾರಿಯ ಅದಕ್ಷತೆಯನ್ನು ತೋರಿಸುವುದಿಲ್ಲವೆ ? ಹಾಗಾದರೆ ಆ ಅಧಿಕಾರಿಗಳ ಮೇಲೆ ಯಾವ ಕ್ರಮ ತೆಗೆದುಕೊಳ್ಳುತ್ತೀರಾ? ಇನ್ನೊಂದು ಪ್ರಶ್ನೆ. ಈ ಕೊಠಡಿಗಳ ನಿರ್ಮಾಣದ ಕೆಲಸ ಕಳಪೆಯಾಗಿದೆ ಎಂಬುದರ ಬಗ್ಗೆ ಸರ್ಕಾರ